MARCH 21, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

- ರಾಜ್ಯದ **2** ಸಾವಿರದ **818** ಕೇಂದ್ರಗಳಲ್ಲಿ, ಇಂದು ಬೆಳಗ್ಗೆ **10** ಗಂಟೆಗೆ, ಎಸ್.ಎಸ್.ಎಲ್.ಸಿ. ಪರೀಕ್ಷೆ, ಆರಂಭ.
- ಕೃಷ್ಣ ಮೇಲ್ದಂಡೆ ಯೋಜನೆ; ಶೀಘ್ರ ಕೇಂದ್ರಕ್ಕೆ ಸರ್ವಪಕ್ಷ ನಿಯೋಗ – ಸಚಿವ ಡಿ.ಕೆ. ಶಿವಕುಮಾರ.
- ರಾಜ್ಯದ ಗ್ರಾಮ ಪಂಚಾಯ್ತಿಗಳ, 'ಅರಿವು ಕೇಂದ್ರ'ದಲ್ಲಿ, ಇಂದು ವಿಶ್ವ ಅರಣ್ಯ ದಿನಾಚರಣೆ.
- 'ಪ್ರಕೃತಿಯ ಪುಟ್ಟ ಸಂದೇಶವಾಹಕರಿಗೆ ಒಂದು ಗೌರವ'; ಧ್ಯೇಯದೊಂದಿಗೆ, ವಿಶ್ವ ಗುಬ್ಬಚ್ಚಿ ದಿನ, ಸಂಪನ್ನ.

<><><>

**ಈಗ ವಾರ್ತೆಗಳ ವಿವರ**

<><><>

ಎಸ್.ಎಸ್.ಎಲ್.ಸಿ. ಪರೀಕ್ಷೆಗಳು ಇಂದಿನಿಂದ ರಾಜ್ಯಾದ್ಯಂತ ಆರಂಭವಾಗಲಿವೆ. ಒಟ್ಟು **2** ಸಾವಿರದ **818** ಕೇಂದ್ರಗಳಲ್ಲಿ ಪರೀಕ್ಷೆಗೆ ವ್ಯವಸ್ಥೆ ಮಾಡಲಾಗಿದೆ. ಇಂದು, ಪ್ರಥಮ ಭಾಷೆ ಕನ್ನಡ, ಸಂಸ್ಕೃತ, ಹಿಂದಿ ಮತ್ತು ಉರ್ದು ಭಾಷೆಯ ಪರೀಕ್ಷೆಗಳು, ಬೆಳಗ್ಗೆ **10** ರಿಂದ ಮಧ್ಯಾಹ್ನ **1.15**ರ ವರೆಗೆ ನಡೆಯಲಿವೆ. ಏಪ್ರಿಲ್ **4** ರಂದು ಪರೀಕ್ಷೆಗಳು ಮುಕ್ತಾಯವಾಗಲಿವೆ. ಈ ಬಾರಿ ಒಟ್ಟು **8** ಲಕ್ಷ **96** ಸಾವಿರದ **447** ವಿದ್ಯಾರ್ಥಿಗಳು ಪರೀಕ್ಷೆಗೆ ಹೆಸರು ನೋಂದಾಯಿಸಿದ್ದಾರೆ. **3** ಲಕ್ಷ **35** ಸಾವಿರದ **468** ಬಾಲಕರು, **3** ಲಕ್ಷ **78** ಸಾವಿರದ **389** ಬಾಲಕಿಯರು ಮತ್ತು ಐವರು ತೃತೀಯ ಲಿಂಗಿಗಳಿದ್ದಾರೆ.

<><><>

ಧಾರವಾಡ ಜಿಲ್ಲಾಧಿಕಾರಿ ದಿವ್ಯಾ ಪ್ರಭು ಹಾಗೂ ಬಾಗಲಕೋಟೆ ಜಿಲ್ಲಾಧಿಕಾರಿ ಕೆ.ಎಂ. ಜಾನಕಿ ಅವರು, ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ಶುಭಾಶಯ ಪತ್ರ ಬರೆದಿದ್ದು, ಪರೀಕ್ಷೆಯನ್ನು ಸಂಭ್ರಮದಿಂದ ಆತ್ಮವಿಶ್ವಾಸದೊಂದಿಗೆ ಎದುರಿಸುವಂತೆ ಅವರು, ಸಂದೇಶ ನೀಡಿದ್ದಾರೆ.

<><><>

ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ತನ್ನ ಎಲ್ಲ ಬಸ್ಸುಗಳಲ್ಲಿ, ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ, ಪರೀಕ್ಷೆಯ ದಿನಗಳಂದು, ಉಚಿತವಾಗಿ ಪ್ರಯಾಣಿಸಲು ಅವಕಾಶ ಕಲ್ಪಿಸಿದೆ.

<><><>

ವಿವಿಧ ಕನ್ನಡಪರ ಸಂಘಟನೆಗಳು, ನಾಳೆ ಶನಿವಾರ 'ಕರ್ನಾಟಕ ಬಂದ್'ಗೆ ಕರೆ ನೀಡಿದ್ದು, ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು ಎಂದು, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ವಿಧಾನ ಪರಿಷತ್ತಿಗೆ ತಿಳಿಸಿದ್ದಾರೆ. ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಶೂನ್ಯ ವೇಳೆಯಲ್ಲಿ ಈ ವಿಷಯ ಪ್ರಸ್ತಾಪಿಸಿದರು. ರಾಜ್ಯಾದ್ಯಂತ ಎಸ್.ಎಸ್.ಎಲ್.ಸಿ. ಪರೀಕ್ಷೆಗಳು ನಡೆಯಲಿರುವ ಹಿನ್ನೆಲೆ, ಬಂದ್‌ಗೆ ಕರೆ ಕೊಟ್ಟಿರುವುದು, ವಿದ್ಯಾರ್ಥಿಗಳು ಹಾಗೂ ಪಾಲಕರಲ್ಲಿ ಆತಂಕ ಮೂಡಿಸಿದೆ. ಕೂಡಲೇ ಸಮಸ್ಯೆ ಪರಿಹರಿಸುವಂತೆ, ಅವರು ಒತ್ತಾಯಿಸಿದರು.

<><><>

ಕೃಷ್ಣ ನದಿ ಮೇಲ್ದಂಡೆ ಯೋಜನೆಯನ್ನು, ರಾಷ್ಟ್ರೀಯ ಯೋಜನೆ ಎಂದು ಘೋಷಿಸಲು, ಶೀಘ್ರ ಸರ್ವಪಕ್ಷ ನಿಯೋಗದೊಂದಿಗೆ ತೆರಳಿ, ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿಕೊಡಲಾಗುವುದು ಎಂದು, ಜಲ ಸಂಪನ್ಮೂಲ ಖಾತೆ ಸಚಿವ ಡಿ.ಕೆ. ಶಿವಕುಮಾರ ತಿಳಿಸಿದ್ದಾರೆ. ವಿಧಾನ ಪರಿ ’ತ್ತಿನ ಪ್ರಶ್ನೋತ್ತರ ಕಲಾಪದಲ್ಲಿ, ಶಾಸಕ ಪಿ.ಎಚ್.ಪೂಜಾರ ಅವರ ಪ್ರಶ್ನೆಗೆ ಸಚಿವರು ಉತ್ತರಿಸಿದರು.ಉದಯಪುರ ಸಮಾವೇಶದಲ್ಲಿ, ಕೇಂದ್ರ ಜಲಶಕ್ತಿ ಖಾತೆ ಸಚಿವರನ್ನು ಭೇಟಿ ಮಾಡಿ, ತಾವು ಸಮಾಲೋಚಿಸಿದ್ದು, ಕೃಷ್ಣ ಮೇಲ್ದಂಡೆ 3ನೇ ಹಂತದ ಯೋಜನೆಯ ಭೂ ಸ್ವಾಧೀನ ಪ್ರಕ್ರಿಯೆ ಬಗ್ಗೆ ವಿವರಿಸಿ, ಅನುಮೋದಿಸುವಂತೆ ಮನವಿ ಮಾಡಿದ್ದಾಗಿ ಹೇಳಿದರು.

<><><>

ಇಂದು, ರಾಜ್ಯದ ಎಲ್ಲ ಗ್ರಾಮ ಪಂಚಾಯ್ತಿಗಳ, 'ಅರಿವು ಕೇಂದ್ರ'ಗಳಲ್ಲಿ, ಮಾರ್ಚ್ ತಿಂಗಳ 'ಓದುವ ಬೆಳಕು' ಕಾರ್ಯಕ್ರಮದಡಿ, 'ವಿಶ್ವ ಅರಣ್ಯ ದಿನ'ದ ಕಾರ್ಯಕ್ರಮ ಆಯೋಜಿತವಾಗಿದೆ. ಅರಣ್ಯ ಇಲಾಖೆಯ, ಸಾಮಾಜಿಕ ಅರಣ್ಯೀಕರಣ ವಿಭಾಗದ ಸಹಯೋಗದಲ್ಲಿ, ಸರ್ಕಾರಿ ಶಾಲೆಗಳ ಆವರಣದಲ್ಲಿ, ಸಸಿ ನೆಡುವ ಕಾರ್ಯಕ್ರಮ ಆಯೋಜಿಸಲಾಗಿದೆ.

<><><>

'ಪ್ರತಿಯೊಂದು ಮಗು ಒಂದೊಂದು ಸಸಿ ನೆಟ್ಟು, ಆ ಸಸಿಯನ್ನು ದತ್ತು ಪಡೆದು, ನೀರುಣಿಸಿ ಕಾಪಾಡುವಂತೆ, ಮಕ್ಕಳಿಗೆ ಅರಿವು ಮೂಡಿಸುವ ಕಾರ್ಯಕ್ರಮ ಜರುಗಲಿದೆ' ಎಂದು, ಗ್ರಾಮೀಣಾಭಿವೃದ್ಧಿ ಖಾತೆ ಸಚಿವ ಪ್ರಿಯಾಂಕ ಖರ್ಗೆ ಸಾಮಾಜಿಕ ಮಾಧ್ಯಮ ಎಕ್ಸ್ ನಲ್ಲಿ ಪ್ರಕಟಿಸಿದ್ದಾರೆ.

<><><>

ಇಂದು ಅಂತಾರಾಷ್ಟ್ರೀಯ ಅರಣ್ಯ ದಿನ. ಎಲ್ಲ ಬಗೆಯ ಅರಣ್ಯಗಳ ಮಹತ್ವದ ಬಗ್ಗೆ ಜಾಗೃತಿ ಮೂಡಿಸುವ ದಿನಾಚರಣೆ. ಈ ಬಾರಿಯ ಆಚರಣೆಯ ಧ್ಯೇಯವಾಕ್ಯ, 'ಅರಣ್ಯಗಳು ಮತ್ತು ಆಹಾರಗಳು. ಆಹಾರ ಭದ್ರತೆ, ಪೋ ’ಣೆ ಮತ್ತು ಜೀವನೋಪಾಯದಲ್ಲಿ ಕಾಡುಗಳ ಪಾತ್ರ ತುಂಬ ಮಹತ್ವದ್ದು ಮತ್ತು ನಿರ್ಣಾಯಕ.

<><><>

ಉತ್ತರಕನ್ನಡ ಜಿಲ್ಲೆಯ, ಹುಲಿ ಮನೆ ಕಾನು, ಗಮಯನ ಮನೆ ಕಾನು, ದೇವಿ ಮನೆ ಕಾನು, ಕತ್ತಲೆ ಕಾನು ಹಾಗೂ ಕರಿ ಕಾನು ಮುಂತಾದ ದೇವರ ಕಾಡುಗಳ ಮೂಲಕ, ಸ್ಥಳೀಯರು ಸುಸ್ಥಿರವಾಗಿ ಕಾಡುಗಳನ್ನು ಉಳಿಸಿ, ಬೆಳೆಸಿ ಮಾದರಿಯಾಗಿದ್ದಾರೆ. ಹಿತ–ಮಿತ ಅರಣ್ಯ ಬಳಕೆಯ, ಅನುಕರಣೀಯ ಮಾದರಿ ವನವಾಸಿಗರು ಸೃಷ್ಟಿಸಿದ್ದಾರೆ.

<><><>

ಅರಣ್ಯಗಳ ಸ್ವಾಮಿತ್ವ, ಶತಮಾನ ಕಂಡ ಹಳಕಾರ ಗ್ರಾಮ ಅರಣ್ಯ ಸಮಿತಿಯಂತೆ, ಸ್ಥಳೀಯ ಗ್ರಾಮ ಅರಣ್ಯ ಸಮಿತಿಗಳದ್ದಾದರೆ, ಅರಣ್ಯ ಮತ್ತು ಉತ್ಪನ್ನ ಎರಡೂ ತಾಳಿಕೆ–ಬಾಳಿಕೆ ಬರುತ್ತವೆ ಎನ್ನುತ್ತಾರೆ, ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ, ಪರಿಸರ ವಿಜ್ಞಾನಗಳ ಅಧ್ಯಯನ ವಿಭಾಗದ, ಕುಮಟಾ ಕ್ಷೇತ್ರ ಕೇಂದ್ರದ ಹಿರಿಯ ವಿಜ್ಞಾನಿ, ಪ್ರೊಫೆಸರ್ ಎಂ.ಡಿ. ಸುಭಾಶ್ಚಂದ್ರನ್.

<><><>

ಪ್ರೊ. ಎಂ.ಡಿ. ಸುಭಾಶ್ಚಂದ್ರನ್ ಧ್ವನಿ 50 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ **X** ಖಾತೆ **@airnews_dharwad** ಹಾಗೂ

ನಮ್ಮ ಫೇಸ್ಬುಕ್ ಖಾತೆ **Airrnu Dharwad** ಅನುಸರಿಸಿ.

<><><>

'ಪ್ರಕೃತಿಯ ಪುಟ್ಟ ಸಂದೇಶವಾಹಕರಿಗೆ ಒಂದು ಗೌರವ' ಎಂಬ ಧ್ಯೇಯದೊಂದಿಗೆ, ವಿಶ್ವ ಗುಬ್ಬಚ್ಚಿಗಳ ದಿನ ಆಚರಿಸಲಾಯಿತು.

<><><>

ಕಲ್ಯಾಣ ಕರ್ನಾಟಕದ ಕಲಬುರಗಿ, ಯಾದಗಿರಿ, ರಾಯಚೂರು, ಬಳ್ಳಾರಿ ಹಾಗೂ ವಿಜಯಪುರ ಜಿಲ್ಲೆಗಳಲ್ಲಿ, ತಾಪಮಾನ ಸರಾಸರಿ 42 ಡಿಗ್ರಿ ಮೀರುತ್ತಿದೆ. ಬಿಸಿಲಾಘಾತ ಮತ್ತು ಬಿಸಿ ಗಾಳಿ ಬೀಸುವಿಕೆ, ಸಹಿಸಲು ಅಸಾಧ್ಯವಾಗಿದೆ.

<><><>

ಈ ಮಧ್ಯೆ, ಕಲಬುರಗಿ ವಿಶ್ವವಿದ್ಯಾಲಯದ, ಹಿಂದುಳಿದ ವರ್ಗಗಳ ಸಮುದಾಯದ, ಕಾವೇರಿ ವಸತಿ ನಿಲಯದ, ಮೇಲ್ವಿಚಾರಕ ನಾಗಪ್ಪ ನಾಗನೂರ್ ಅವರ ಮಾರ್ಗದರ್ಶನದಲ್ಲಿ, ಸಂತೋಷಕುಮಾರ, ಶೈಲೇಶ, ಕರ್ಣ ಹಾಗೂ ಬೀರಪ್ಪ ಅವರ ನೇತೃತ್ವದ ತಂಡ, ವಸತಿ ನಿಲಯದ ಆವರಣದಲ್ಲಿರುವ, 40ಕ್ಕೂ ಹೆಚ್ಚು ಗಿಡ–ಮರಗಳಿಗೆ, ಟಿನ್ ಡಬ್ಬಗಳಿಂದ ತಯಾರಿಸಿದ, ಫೀಡರ್ ಡಬ್ಬಿ ಮತ್ತು ಮಣ್ಣಿನ ಮಡಕೆಗಳನ್ನು ಕಟ್ಟಿ, ನೀರು, ಧಾನ್ಯ ಹಾಕಿಟ್ಟು, ಪಕ್ಷಿಗಳ ದಾಹ ಮತ್ತು ಹಸಿವು ತಣಿಸುತ್ತಿದ್ದಾರೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಆಕಾಶವಾಣಿಯ ಜನಪ್ರಿಯ ಮನ್ ಕಿ ಬಾತ್ ನ 119ನೇ ಸಂಚಿಕೆಯಲ್ಲಿ, ಬಿಸಿಲ ಬೇಗೆಯಿಂದ ಗುಬ್ಬಚ್ಚಿಗಳನ್ನು ರಕ್ಷಿಸುವಂತೆ, ದೇಶದ ಜನರಲ್ಲಿ ಮನವಿ ಮಾಡಿದ್ದಾರೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಧ್ವನಿ 50 ಸೆಕೆಂದುಗಳು

<><><>

ಕಲ್ಯಾಣ ಕರ್ನಾಟಕ, ಪ್ರದೇಶ ಅಭಿವೃದ್ಧಿ ಮಂಡಳಿಯ, "ಅಕ್ಷರ ಆವಿ ್ಕಾರ" ಯೋಜನೆಯಡಿ, ಪ್ರಸಕ್ತ ಸಾಲಿನಿಂದ, ಕಲಬುರಗಿ ವಿಭಾಗದ, 306 ಪ್ರೌಢ ಶಾಲೆಗಳಲ್ಲಿ, ಹೊಸದಾಗಿ ಮಾಹಿತಿ ತಂತ್ರಜ್ಞಾನ ಕೋರ್ಸ್ ಪ್ರಾರಂಭಿಸಲಾಗಿದೆ ಎಂದು, ಶಾಲಾ ಶಿಕ್ಷಣ ಇಲಾಖೆಯ ಅಪರ ಆಯುಕ್ತ ಎಸ್. ಆಕಾಶ ತಿಳಿಸಿದ್ದಾರೆ. **National Skill Qualification Frame Work – N.S.Q.F.** ಕಾರ್ಯಮದಡಿ, **Skill at School** ಮಾದರಿಯಲ್ಲಿ, ವಿದ್ಯಾರ್ಥಿಗಳ ಆಸಕ್ತಿ ಅನುಸಾರ, ಬೇಡಿಕೆ ಇರುವ, ಮಾಹಿತಿ ತಂತ್ರಜ್ಞಾನ ವಿ ’ಯವನ್ನು ಪ್ರೌಢ ಶಾಲಾ ಹಂತದಲ್ಲಿ ಪ್ರಾರಂಭಿಸಲಾಗಿದೆ ಎಂದು, ಅವರು ಮಾಹಿತಿ ನೀಡಿದ್ದಾರೆ.

<><><>

ರಾಜ್ಯದ ಕರಾವಳಿ, ಮಲೆನಾಡು ಮತ್ತು ದಕ್ಷಿಣ ಒಳನಾಡು ಜಿಲ್ಲೆಗಳಲ್ಲಿ ನಾಳೆ, ಗುಡುಗು, ಮಿಂಚು ಮತ್ತು ಬಿರುಗಾಳಿ ಸಹಿತ ಗಾಳಿಯ ವೇಗ, ಗಂಟೆಗೆ 30 ರಿಂದ 40 ಕಿಲೋ ಮೀಟರ್ ತಲುಪುವ ಸಾಧ್ಯತೆ ಇದೆ. ಅಲ್ಲಲ್ಲಿ ಚದುರಿದಂತೆ ಸಾಧಾರಣ ಮಳೆಯಾಗಲಿದೆ ಎಂದು, ಹವಾಮಾನ ಇಲಾಖೆ ತಿಳಿಸಿದೆ. ಉತ್ತರ ಒಳನಾಡು ಮತ್ತು ದಕ್ಷಿಣ ಒಳನಾಡು ಜಿಲ್ಲೆಗಳಲ್ಲಿ ಬಿಸಿ ಮತ್ತು ಆರ್ದ್ರ ವಾತಾವರಣ ಹೆಚ್ಚಾಗುವ ಸಾಧ್ಯತೆಯಿದ್ದು, ಜನ ಮುನ್ನೆಚ್ಚರಿಕೆ ವಹಿಸಲು, ಕೋರಲಾಗಿದೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಧಾರವಾಡ ಕೃಷಿ ವಿಶ್ವವಿದ್ಯಾಲಯದ, ರೈತರ ಜ್ಞಾನಾಭಿವೃದ್ಧಿ ಕೇಂದ್ರದಲ್ಲಿ, ಇಂದು ಬೆಳಗ್ಗೆ 10 ಗಂಟೆಗೆ, **'Marching towards Vikasit Bharat; Focus on Safety & Well being'** ಕುರಿತ, ವಿಚಾರ ಸಂಕಿರಣ ಆಯೋಜಿತವಾಗಿದೆ.

<><><>

ಧಾರವಾಡ ಜಿಲ್ಲೆ, ಹುಬ್ಬಳ್ಳಿಯ ಅಗ್ನಿ ದೇವಾಲಯ ಸೇರಿದಂತೆ, ಪಾರ್ಸಿ ಬಂಧುಗಳು ತಮ್ಮ ಹೊಸ ವ ರ್ಷ, ನವ್‌ರೋಜ್ ಆಚರಿಸಿ, ಶಾಂತಿ, ನೆಮ್ಮದಿ ಬಯಸಿ, ಹಬ್ಬವನ್ನು ಸಂಭ್ರಮಿಸಿದರು.

<><><>

ಸರ್ವೋಚ್ಚ ನ್ಯಾಯಾಲಯದ ವಿಭಾಗೀಯ ಪೀಠವನ್ನು, ಹುಬ್ಬಳ್ಳಿ-ಧಾರವಾಡ ಭಾಗದಲ್ಲಿ ಸ್ಥಾಪಿಸಬೇಕೆಂದು, ಆಡಳಿತ ಪಕ್ಷದ ಶಾಸಕ, ಎನ್.ಎಚ್.ಕೋನರಡ್ಡಿ ವಿಧಾನಸಭೆಯಲ್ಲಿ ಆಗ್ರಹಿಸಿದರು.

<><><>

ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ, ವಿದ್ಯುತ್ ಬೆಲೆಯನ್ನು, ಪ್ರತಿ ಯುನಿಟ್‌ಗೆ 36 ಪೈಸೆ ಹೆಚ್ಚಿಸಿ, ಆದೇಶಿಸಿದೆ. ಏಪ್ರಿಲ್ 1 ರಿಂದ ಹೊಸ ದರ ಜಾರಿಯಾಗಲಿದೆ.

<><><>

ಉಪ ಲೋಕಾಯುಕ್ತ ಕೆ.ಎನ್. ಫಣೀಂದ್ರ ಅವರು, ಶಿವಮೊಗ್ಗದಲ್ಲಿ 65 ಪ್ರಕರಣಗಳನ್ನು ಇತ್ಯರ್ಥಪಡಿಸಿ, ವಕೀಲರೊಂದಿಗೆ ಸಂವಾದ ನಡೆಸಿದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ರಾಜ್ಯದ 2 ಸಾವಿರದ 818 ಕೇಂದ್ರಗಳಲ್ಲಿ, ಇಂದು ಬೆಳಗ್ಗೆ 10 ಗಂಟೆಗೆ, ಎಸ್.ಎಸ್.ಎಲ್.ಸಿ. ಪರೀಕ್ಷೆ, ಆರಂಭ.

- ಕೃಷ್ಣ ಮೇಲ್ದಂಡೆ ಯೋಜನೆ; ಶೀಘ್ರ ಕೇಂದ್ರಕ್ಕೆ ಸರ್ವಪಕ್ಷ ನಿಯೋಗ – ಸಚಿವ ಡಿ.ಕೆ. ಶಿವಕುಮಾರ.

- ರಾಜ್ಯದ ಗ್ರಾಮ ಪಂಚಾಯ್ತಿಗಳ, 'ಅರಿವು ಕೇಂದ್ರ'ದಲ್ಲಿ, ಇಂದು ವಿಶ್ವ ಅರಣ್ಯ ದಿನಾಚರಣೆ.

- 'ಪ್ರಕೃತಿಯ ಪುಟ್ಟ ಸಂದೇಶವಾಹಕರಿಗೆ ಒಂದು ಗೌರವ'; ಧ್ಯೇಯದೊಂದಿಗೆ, ವಿಶ್ವ ಗುಬ್ಬಚ್ಚಿ ದಿನ, ಸಂಪನ್ನ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>